ಅಸಲು ದಾವಾ ನಂಃ 50/2018

ಪಿ.ಡಬ್ಲೂ

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**

**ಧಾರವಾಡ.**

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **01.07.2026**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ. ವಕೀಲರಿಂದ**

1. ನಾನು ಎಸ್ ಎಸ್ ಎಲ್ ಸಿ ಯವರೆಗೆ ವ್ಯಾಸಾಂಗ ಮಾಡಿದ್ದೇನೆ. ಕೊರ್ಟಿಗೆ ನಾನು ಮತ್ತು ಮಂಜುನಾಥ ಬಡಕೂರಿ ಒಟ್ಟಿಗೆ ಬಂದಿದ್ದೀರಿ ಎಂದರೆ ನಾನು ಒಬ್ಬನೆ ಬಂದಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಾನು ಮಂಜುನಾಥ ಬಡಕೂರಿ ಒಟ್ಟಿಗೆ ಹೊರಗೆ ಕುಳಿತುಕೊಂಡಿದ್ದೇವೆ ಎಂದರೆ ನಾನು ಒಬ್ಬನೆ ಕುಳಿತುಕೊಂಡಿದ್ದೆ. ಮಂಜುನಾಥ ಬಡಕೂರಿ ಈ ದಿನ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಇರಬಹುದು.

2. ವಾದಿಯು ದಾವೆಯನ್ನು ಅವರು ಕಾಕಾ ಅವರ ವಿರುದ್ಧ ವಿಭಾಗ ಕೋರಿ ದಾಖಲಿಸಿರುತ್ತಾರೆ. 8 ಜನರ ವಿರುದ್ಧ ವಾದಿ ದಾವೆ ದಾಖಲಿಸಿದ್ದಾರೆ. ಪ್ರತಿವಾದಿ ನಂಬರಃ 19, 22 ಮತ್ತು 23 ಇವರು ಪ್ರತಿವಾದಿ ನಂಬರ 1 ರಿಂದ 8 ರ ಮನೆಗೆ ಬಂದು ಹೋಗುತ್ತಾರೆ ಎಂದರೆ ಸರಿ. ಮಂಜುನಾಥ ಬಡಕೂರಿ ಅವರ ಸಂಚಗಾರ ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದೇನೆ ಎಂದರೆ ನನಗೆ ನೆನಪಿಲ್ಲ. ನಿಡಿಃ3(ಎ) ನನ್ನ ಸಹಿ ಎಂದರೆ ಸರಿ.

ಪಿ.ಡಬ್ಲೂ

3. ಖರೀದಿ ಸಂಚಗಾರ ಪತ್ರ ಆದಾಗ ಈ ದಾವೆ ಇತ್ಯರ್ಥಕ್ಕೆ ಬಾಕಿ ಇದ್ದ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಖರೀದಿ ಸಂಚಗಾರ ಪತ್ರ ಯಾರು ಯಾರಿಗೆ ಬರೆದುಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಂಚಗಾರ ಪತ್ರವನ್ನು ನೀವು ಓದಿ ಸಹಿ ಮಾಡಿಲ್ಲ ಎಂದರೆ ನನಗೆ ನೆನಪಿಲ್ಲ. ನಿಡಿಃ 3 ರನ್ನು ನೊಂದಾಯಿಸಲು ಉಪನೊಂದಣಾಧಿಕಾರಿ ಕಚೇರಿಗೆ ವಾದಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ವಾದಿಯನ್ನು ದಾಖಲೆ ಬಗ್ಗೆ ವಿಚಾರಿಸಿದಾಗ ನಾನು ಒಂದು ವ್ಯವಹಾರ ಮಾಡಿದ್ದೇನೆ , ಆ ಸಂಬಂಧ ದಾಖಲೆ ನೊಂದಾಯಿಸುತ್ತಿದ್ದೇನೆ ಎಂದು ಹೇಳಿರುತ್ತಾರೆ.

4. ವಾದಿ ಮತ್ತು ನಾನು ಗೆಳೆಯರು ಎಂದರೆ ನನಗೆ ಪರಿಚಯ ಅಷ್ಟೆ. ಸಂಚಗಾರ ಪತ್ರ ಮಾಡಿಸುವ ಸಮಯದಲ್ಲಿ ಈ ದಾವೆಯ ಬಗ್ಗೆ ವಾದಿ ನನಗೆ ಹೇಳಿದ್ದರು ಎಂದರೆ ಸರಿಯಲ್ಲ. ಮಂಜುನಾಥ ಬಡಕೂರಿ ಅವರು ಈಗ ಮಹಾನಗರ ಪಾಲಿಕೆಯ 23 ನೇ ವಾರ್ಡಿನ ಸದಸ್ಯರು ಎಂದರೆ ಸರಿ. ನನ್ನ ಮನೆ ವಾರ್ಡ ನಂಬರಃ24 ರಲ್ಲಿ ಇದೆ. ಮಂಜುನಾಥ ಬಡಕೂರಿ ಅವರು ನವಲೂರು ಗ್ರಾಮದವರು ಎಂದರೆ ಸರಿ. ಅವರಿ ಪರಿಚಯವಿದೆ ಎಂದರೆ ಸರಿ.

5. ನಾನು ಪಿಡಬ್ಲೂ 2 ಮತ್ತು ಮಂಜುನಾಥ ಬಡಕೂರಿ ಸೇರಿಕೊಂಡು ವಾದಿಯ ಮುಖಾಂತರ ಈ ದಾವೆ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಯು ಹಜಾರೆ ಮನೆತನಕ್ಕೆ ಸಂಬಂಧಿಸಿದವರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರು ಮಾರುತಿ ಅವರ ಮಗ ಇರುತ್ತಾರೆ. ವಾದಿಯು ಮಾರುತಿ ಅವರ ಮಗ ಅಲ್ಲ ಎಂದರೆ ಸರಿಯಲ್ಲ. ವಾದಿಗೂ ದಾವಾ ಆಸ್ತಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

6. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ವಾದಿಯು ಈ ಮೊದಲು ಕೆಲವು ದಾವೆಗಳನ್ನು ದಾಖಲಿಸಿದ್ದರು ಎಂದರೆ ಸರಿಯಲ್ಲ. ಮೊದಲು ದಾಖಲಿಸಿದ ದಾವೆಗಳ ಬಗ್ಗೆ ವಾದಿ ನನಗೆ ಏನು ಹೇಳಿಲ್ಲ. ಪ್ರಮಾಣ ಪತ್ರಕ್ಕೆ ವಾದಿ ಮಾಹಿತಿ ನೀಡಿದ್ದಾರೆ ಎಂದರೆ ನಾನು ಮಾಹಿತಿ ನೀಡಿದ್ದೇನೆ. ನನಗೆ ದಾವೆಯ ಬಗ್ಗೆ ಮಾಹಿತಿ ಇಲ್ಲದಿದ್ದರೂ ವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಸಲು ದಾವಾ ನಂಃ 50/2018

ಪಿ.ಡಬ್ಲೂ

**(ಪ್ರತಿವಾದಿ ನಂಬರ ಃ19, 20 ಮತ್ತು 23 ಪರ ವಕೀಲರು ಪ್ರತಿವಾದಿ ನಂಬರಃ 1 ರಿಂದ 8 ರವರ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.** )

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ರಂಗಸ್ವಾಮಿ ಜೆ)**

4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,

ಧಾರವಾಡ.